**ದಿನಾಂಕ: 26/06/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ** ಶ್ರೀ ಕೆ.ಎಸ್ **ವಕೀಲರಿಂದ:**

6. ನನ್ನ ತಾಯಿಯ ಹೆಸರು ತಾಯಮ್ಮ. ನನ್ನ ತಾಯಿ ಜೀವಂತ ಇದ್ದಾರೆ. ಈ ದಾವೆಯಲ್ಲಿ ನನ್ನ ತಾಯಿಯನ್ನು ಪಕ್ಷಗಾರನ್ನಾಗಿ ಮಾಡಿಲ್ಲ. ಅವರನ್ನು ಪಕ್ಷಗಾರನ್ನಾಗಿ ಮಾಡಲು ತೊಂದರೆ ಇರಲಿಲ್ಲ. 2 ನೇ ವಾದಿಗೆ ಇಬ್ಬರು ಮಕ್ಕಳು. 2 ನೇ ವಾದಿ ಈಗ ತೀರಿಕೊಂಡಿದ್ದಾರೆ. ನನ್ನ ತಮ್ಮ ತೀರಿಕೊಂಡು 4 ವರ್ಷ ಕಳೆದಿದೆ. ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿದ್ದೇನೆ. ಸರ್ವೆ ನಂ.83 ರ ಚಕ್ಕುಬಂದಿ ಪೂರ್ವಕ್ಕೆ ಹೊಂಬೇಗೌಡರ ಜಮೀನು, ಪಶ್ಚಿಮಕ್ಕೆ ಅಣ್ಣೇಗೌಡರ ಜಮೀನು, ಉತ್ತರಕ್ಕೆ ಶಿವಣ್ಣೇಗೌಡರ ಜಮೀನು, ದಕ್ಷಿಣಕ್ಕೆ ನಮ್ಮ ಜಮೀನು. ಸರ್ವೆ ನಂ.83 ರಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕಾಳೇಗೌಡರಿಗೆ ಓದಲು, ಸಹಿ ಮಾಡಲು ಗೊತ್ತಿರಲಿಲ್ಲ.

7. ಕ್ರಯಪತ್ರದಲ್ಲಿ ಬರೆದಿರುವ ಕಾರಣ ದಾವಾಸ್ವತ್ತು 1 ಎಕರೆ 5 ಗುಂಟೆ ಇದೆ ಎಂದು ಗೊತ್ತಾಯಿತು. ಕ್ರಯಪತ್ರದಲ್ಲಿ ಬರೆದಿರುವುದನ್ನು ಬಿಟ್ಟು ಖುದ್ದಾಗಿ ಯಾರ್ಯಾರು ಎಷ್ಟು ವಿಸ್ತೀರ್ಣದ ಸ್ವಾಧೀನ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಒಟ್ಟು 9 ಎಕರೆ 26 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ 25 ವರ್ಷಗಳ ಹಿಂದೆ ತೀರಿಕೊಂಡ ನಂತರ ನಾನು ವಿದ್ಯಾವಂತನಾಗಿರುವುದರಿಂದ ನಮ್ಮ ಸ್ವತ್ತು ಯಾವುದು ಎಂದು ತಿಳಿದುಕೊಂಡಿದ್ದೇನೆ ಎಂದರೆ ಸರಿ. ನನಗೆ ಈಗ 65 ವರ್ಷ ವಯಸ್ಸಾಗಿದೆ. ನಾನು ಪದವೀಧರನಾಗಿದ್ದೇನೆ. ನನಗೆ ಕಳೆದ 30-35 ವರ್ಷಗಳಿಂದ ನಮ್ಮ ಎಲ್ಲಾ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಸರ್ವೆ ನಂಬರ್ ಬದಲಾಗಿರುವುದು ಹೇಗೆ ಗೊತ್ತಾಯಿತು ಎಂದರೆ ಕ್ರಯಪತ್ರದಿಂದ ಗೊತ್ತಾಯಿತು ಎಂದು ನುಡಿಯುತ್ತಾರೆ. ಸರ್ವೆ ನಂ.83 ರಲ್ಲಿ ಪ್ರತಿವಾದಿ ಮತ್ತು ಅವರ ತಮ್ಮ 1985-86 ರವರೆಗೆ ಜಂಟಿ ಸ್ವಾಧೀನ ಹೊಂದಿದ್ದರು ಎಂದರೆ ಹೊಂದಿರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ.83 ರಲ್ಲಿ 1985-86 ರವರೆಗೆ ಪ್ರತಿವಾದಿ ಮತ್ತು ಅವರ ತಮ್ಮ ಶಿವಣ್ಣ ಹಕ್ಕು ಮತ್ತು ಸ್ವಾಧೀನ ಹೊಂದಿದ್ದರು ಎಂದರೆ ಸರಿ. 1985-86 ರಲ್ಲಿ ಪ್ರತಿವಾದಿ ಮತ್ತು ಶಿವಣ್ಣ ಮೌಖಿಕವಾಗಿ ವಿಭಾಗ ಮಾಡಿಕೊಂಡು, ಸರ್ವೆ ನಂ.83 ಪ್ರತಿವಾದಿಯ ಹಿಸ್ಸೆಗೆ ಮತ್ತು ಉಳಿಕೆ ಪಿತ್ರಾರ್ಜಿತ ಸ್ವತ್ತು ಶಿವಣ್ಣ ನವರ ಹೆಸರಿಗೆ

ವಿಭಾಗವಾಯಿತು ಎಂದರೆ ಸರಿ. ಸರ್ವೆ ನಂ.83 ರಲ್ಲಿ ಪ್ರತಿವಾದಿಗೆ ಹಿಸ್ಸೆಗೆ ಬಂದ ನಂತರ ಅವರ ಕುಟುಂಬದೊಂದಿಗೆ ಹಕ್ಕು ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಹಿಸ್ಸೆಗೆ ಸರ್ವೆ ನಂ.83 ಬಂದ ನಂತರ ಅವರೊಬ್ಬರೇ ಹಕ್ಕು, ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ಸರ್ವೆ ನಂ.83 ಪ್ರತಿವಾದಿಯ ಹೆಸರಿನಲ್ಲಿ ಆರ್.ಟಿ.ಸಿ ಇದ್ದು, ಈಗಲೂ ಸಹ ಅವರು ಕುಟುಂಬ ಸಮೇತಾ ಹಕ್ಕು ಮತ್ತು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ಅದೇ ರೀತಿ ಸರ್ಕಾರಕ್ಕೆ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ.

8. ನಿಪಿ.1 ಕ್ರಯಪತ್ರದ ಬಗ್ಗೆ ನನಗೆ 30-40 ವರ್ಷಗಳ ಹಿಂದೆಯೇ ತಿಳಿದಿತ್ತು. ಆಗಲೇ ಈ ದಾವೆಯನ್ನು ಹೂಡಲು ತೊಂದರೆ ಇರಲಿಲ್ಲ. ನಾನೇ ವಾದಪತ್ರದ ವಿಚಾರಗಳನ್ನು ಹೇಳಿ ಬರೆಸಿರುತ್ತೇನೆ. ಸರ್ವೆ ನಂ.83 ರಲ್ಲಿ ಪ್ರಸ್ತುತ ವರ್ಷ ಪ್ರತಿವಾದಿ ಹೊಗೆಸೊಪ್ಪನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.83 ರಲ್ಲಿ ಪ್ರತಿವಾದಿ ಸಾಲಪಡೆದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.83 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯಾಗಲೀ, ಅವರ ಕುಟುಂಬದವರಾಗಲೀ ನನ್ನ ತಂದೆಯವರಿಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನಾಗಲೀ ನನ್ನ ಕುಟುಂಬದವರಾಗಲೀ ಸರ್ವೆ ನಂ.83 ರಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.83 ರಲ್ಲಿ ಸ್ವಾಧೀನ ಹೊಂದಿದ್ದೇವೆ ಎಂದು ತೋರಿಸಲು ದಾಖಲಾತಿಗಳು ಇಲ್ಲ, ಆದರೆ ಸ್ವಾಧೀನಹೊಂದಿ ವ್ಯವಸಾಯ ಮಾಡುತ್ತಿದ್ದೇವೆ. ಸ್ವಾಧೀನ ಹೊಂದಿದ ಬಗ್ಗೆ ಫೋಟೋ ಮತ್ತು ಸಿ.ಡಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ.83 ರಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು ಕಬಳಿಸಬೇಕೆಂದು ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**